ಶ್ರೀ ಸಿದ್ಧರಾಮಯ್ಯ :– ನಾವು ರೈತರ ಬಗ್ಗೆ ಎಷ್ಟು ಸಹಾಯ ಮಾಡುವುದಕ್ಕೆ ಸಾಧ್ಯವಿದೆಯೋ, ಅವರ ಬಗ್ಗೆ ಬದ್ಧತೆ ಇದೆ ಹಾಗೂ ಕಳಕಳಿಯೂ ಕೂಡ ಇದೆ. ಅವರಿಗೆ ನಾವು ಸಹಾಯವನ್ನು ಮಾಡಿದ್ದೇವೆ. ಸಾಲದ ಅವಧಿಯನ್ನು ಮುಂದುವರಿಸುವಂತಹ ಕೆಲಸವನ್ನು ನಾವು ಮಾಡಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10:00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು 5 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ : 1ನೇ ಜುಲೈ 2005 ರಂದು ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

****

ಸಹಕಾರ ಬ್ಯಾಂಕ್, ತಾಲ್ಲೂಕು ಕೃಷಿ ಮಾರಾಟ ಮಂಡಳಿ, ಬೀಡಿ ಮತ್ತು ಜನರಲ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರಾಗಿ, ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಐದು ಮತ್ತು ಆರನೇ ವಿಧಾನಸಭೆಗೆ ಮೂಡುಬಿದರೆ ಕ್ಷೇತ್ರದಿಂದ ಚುನಾಯಿತರಾಗಿ, ಶ್ರೀ ದೇವರಾಜ್ ಅರಸ್‌ರವರ ಸಚಿವ ಸಂಪುಟದಲ್ಲಿ ಪ್ರಾಥಮಿಕ ಶಿಕ್ಷಣ ಸಚಿವರಾಗಿ ಹಾಗೂ ಕರ್ನಾಟಕ ರಾಜ್ಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 29–06–2005 ರಂದು ನಿಧನ ಹೊಂದಿದರು.

2. ಶ್ರೀ ಸುನೀಲ್‌ದತ್

ಖ್ಯಾತ ಅಭಿನೇತ, ಹಿಂದಿ ಚಿತ್ರ ರಂಗದ ಹಿರಿಯ ನಟ, ಮಾನವಾನುಕಂಪಿ, ರಾಷ್ಟ್ರಪ್ರೇಮಿ ಹಾಗೂ ಕೇಂದ್ರ ಸಚಿವರಾದ ಶ್ರೀ ಸುನಿಲ್‌ದತ್ ಅವರು 25–05–2005 ರಂದು ನಿಧನರಾದರು.

ಈಗಿನ ಪಾಕಿಸ್ತಾನದ ಪಂಜಾಬಿನ ಝೀಲಂ ಜಿಲ್ಲೆಯಲ್ಲಿರುವ ಖುರ್ದ್ ಎಂಬ ಹಳ್ಳಿಯಲ್ಲಿ 6 ನೇ ಜೂನ್, 1929 ರಲ್ಲಿ ಜನಿಸಿದ ಶ್ರೀಯುತರು ಸಿನಿಮಾ ರಂಗದಲ್ಲಿ ನಿರ್ಮಾಪಕರು, ನಿರ್ದೇಶಕರು ಆಗಿ ಸೇವೆಸಲ್ಲಿಸಿದ್ದಾರಲ್ಲದೆ, ಸುಮಾರು 100 ಚಿತ್ರಗಳಲ್ಲಿ ಅಭಿನಯಿಸಿ ಶ್ರೇಷ್ಠ ನಟನೆಂಬ ಹೆಗ್ಗಳಿಕೆಗೂ ಪಾತ್ರರಾಗಿರುತ್ತಾರೆ. ಅವರ ಪ್ರಮುಖ ಹಿಂದಿ ಚಿತ್ರವಾದ **"ಮದರ್ ಇಂಡಿಯಾ"** ಹಿಂದಿ ಚಿತ್ರರಂಗಕ್ಕೆ ಮೆರಗು ನೀಡಿದ ಚಿತ್ರಗಳಲ್ಲಿ ಒಂದಾಗಿದೆ. ಶ್ರೀಯುತರು ಮುಂಬೈನಲ್ಲಿ ಷರೀಫ್‌ಆಗಿ ಕೆಲಸ ನಿರ್ವಹಿಸಿದ್ದರಲ್ಲದೆ, 8 ನೇ ಲೋಕಸಭೆಯಲ್ಲಿ ಪ್ರಥಮವಾಗಿ ಆಯ್ಕೆಗೊಂಡು ಸತತವಾಗಿ ಐದುಬಾರಿ ಲೋಕಸಭಾ ಸದಸ್ಯರಾಗಿರುತ್ತಾರೆ. 14 ನೇ ಲೋಕಸಭೆಯಲ್ಲಿ ಯುವಜನ ಮತ್ತು ಕ್ರೀಡಾ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದ ಒಬ್ಬ ನುರಿತ ಸಂಸದೀಯ ಪಟು, ರಾಷ್ಟ್ರಪ್ರೇಮಿ ಹಾಗೂ ಹಿಂದಿ ಚಿತ್ರರಂಗದ ಒಬ್ಬ ಶ್ರೇಷ್ಠ ಕಲಾವಿದನನ್ನು ಕಳೆದುಕೊಂಡಂತಾಗಿದೆ.

3. ಶ್ರೀ ಸಿ.ವಿ. ರಾಜಗೋಪಾಲ್

ಖ್ಯಾತ ಪತ್ರಿಕೋದ್ಯಮಿ ಶ್ರೀ ಸಿ.ವಿ. ರಾಜಗೋಪಾಲ್ ಅವರು ದಿನಾಂಕ 05–04–2005 ರಂದು ನಿಧನರಾದರು.

ವೃತ್ತಿಪರತೆಯ ಹಿರಿತನ ಹಾಗೂ ನಿಷ್ಠೆಗಳಿಂದಾಗಿ ಪತ್ರಿಕೋದ್ಯಮದ ಜಾಂಬವಂತ ಎಂದೇ ಖ್ಯಾತರಾಗಿದ್ದ ಶ್ರೀ ರಾಜಗೋಪಾಲ್‌ರವರು ಪತ್ರಿಕೋದ್ಯಮಕ್ಕೆ ಸಲ್ಲಿಸಿರುವ ಸೇವೆ

ಅಪಾರ. ಮುಂಬೈನಲ್ಲಿ ಪತ್ರಿಕೋದ್ಯಮ ವ್ಯಾಸಂಗ ಮಾಡಿದ ಶ್ರೀಯುತರು ಕರ್ನಾಟಕದಲ್ಲಿ ವಿಶ್ವ ಕನಾಟಕ ಪತ್ರಿಕೆಯಲ್ಲಿ ಪತ್ರಿಕೋದ್ಯಮ ಪ್ರಾರಂಭಿಸಿ, ನಂತರ ಪ್ರಜಾವಾಣಿ ಪತ್ರಿಕೆಯ ಸಹಾಯಕ ಸಂಪಾದಕರಾಗಿ ಹಾಗೂ ಕನ್ನಡ ಪ್ರಭ ಮತ್ತು ಉದಯವಾಣಿ ಪತ್ರಿಕೆಗಳಲ್ಲಿ ಅಂಕಣ ಬರಹಗಾರರಾಗಿ ಸೇವೆ ಸಲ್ಲಿಸಿರುತ್ತಾರೆ.

ಹರಿತ ಹಾಗೂ ಮೊನಚಾದ ರಾಜಕೀಯ ವಿಶ್ಲೇಷಣೆಗೆ ಖ್ಯಾತರಾಗಿದ್ದ ಇವರು ಪತ್ರಿಕೋದ್ಯಮದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದ ಧೀಮಂತ ಪತ್ರಿಕೋದ್ಯಮಿಯಾಗಿದ್ದರು.

ಶ್ರೀಯುತರ ನಿಧನದಿಂದ ಕನ್ನಡ ಪತ್ರಿಕೋದ್ಯಮಕ್ಕೆ ತುಂಬಲಾರದಂತಹ ನಷ್ಟವುಂಟಾಗಿದೆ.

4. ಪ್ರೊ॥ ಸಿ.ಡಿ. ನರಸಿಂಹಯ್ಯ

ಪ್ರಖ್ಯಾತ ಸಾಹಿತಿ, ಪದ್ಮಭೂಷಣ ಪುರಸ್ಕೃತ ಪ್ರೊ॥ ಸಿ.ಡಿ. ನರಸಿಂಹಯ್ಯ ಅವರು ದಿನಾಂಕ 12-04-2005 ರಂದು ನಿಧನರಾದರು.

ಶ್ರೀಯುತರು ಹಿರಿಯ ವಿದ್ವಾಂಸರು ಹಾಗೂ ನಿವೃತ್ತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಮೈಸೂರು ವಿಶ್ವವಿದ್ಯಾಲಯದ ಆಂಗ್ಲ ಪ್ರಾಧ್ಯಾಪಕರಾಗಿ ಹಾಗೂ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿರುವುದಲ್ಲದೆ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಇವರಿಗೆ 1990 ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲಾಗಿತ್ತು.

ಅಧ್ಯಯನ ಹಾಗೂ ಅಧ್ಯಾಪನದ ಮೂಲ ಸಾಂಸ್ಕೃತಿಕ ಲೋಕದಲ್ಲಿ ಹೆಜ್ಜೆ ಗುರುತು ಮೂಡಿಸಿದ್ದ ಶ್ರೀಯುತರು ಮೈಸೂರಿನಲ್ಲಿ ಧ್ವನ್ಯಾ ಲೋಕ ಎಂಬ ಸಾಹಿತ್ಯ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದ್ದರು.

ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ, ಪುರಸ್ಕಾರಗಳು ಪ್ರೊಫೆಸರ್ ಅವರಿಗೆ ಸಂದಿದ್ದವು.

ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಹಿರಿಯ ವಿದ್ವಾಂಸರನ್ನು ಕಳೆದುಕೊಂಡಂತಾಗಿದೆ.

5. ಶ್ರೀ ಬಿ.ಸಿ. ರಾಮಚಂದ್ರ ಶರ್ಮ

ಆಧುನಿಕ ಕನ್ನಡ ಕಾವ್ಯಕ್ಷೇತ್ರದ ಅಗ್ರಪಂಕ್ತಿಯ ಕವಿ. ಶ್ರೀ ಬಿ.ಸಿ. ರಾಮಚಂದ್ರ ಶರ್ಮ ಅವರು ದಿನಾಂಕ 18–04–2005 ರಂದು ನಿಧನರಾದರು.

28 ನೇ ನವೆಂಬರ್ 1925 ರಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲದ ಬೋಗಾದಿಯಲ್ಲಿ ಜನಿಸಿದ ಶ್ರೀಯುತರು ಕನ್ನಡ ಕಾವ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರ ಹಾಗೂ ಅಮರ. ಹಲವಾರು ಕಥೆ, ಕವನ ಕಾದಂಬರಿಗಳನ್ನು ರಚಿಸುವುದರ ಮೂಲಕ ಕನ್ನಡ ಕಥಾ ಸಾಹಿತ್ಯದಲ್ಲಿ ನವ್ಯ ಸಂವೇದನೆಯನ್ನು ತಂದವರಲ್ಲಿ ಒಬ್ಬರು. ಅನೇಕ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಕನ್ನಡವನ್ನು ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿದ್ದರು. ಶರ್ಮ ಅವರು ಅನ್ಯಭಾಷೆಯ ಅತ್ಯುತ್ತಮ ಕವಿತೆಗಳನ್ನು ಕನ್ನಡಕ್ಕೆ ಮತ್ತು ಕುವೆಂಪು ಹಾಗೂ ಮಾಸ್ತಿಯವರ ಕಾದಂಬರಿಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವ ಮೂಲಕ ಇಲ್ಲಿನ ಸಾಹಿತ್ಯ ಸಂಪತ್ತನ್ನು ಹೊರಜಗತ್ತಿಗೆ ಪರಿಚಯಿಸಿದ್ದಾರೆ. ಇವರಿಗೆ ಅನುವಾದಕ್ಕಾಗಿ "ಕಥಾ ಪ್ರಶಸ್ತಿ"ಯನ್ನು ನೀಡಿ ಗೌರವಿಸಲಾಗಿದೆ. ಇದಲ್ಲದೆ ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶಿವರಾಮಕಾರಂತ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ರಾಜ್ಯ ಸರ್ಕಾರವು ನೀಡಿ ಗೌರವಿಸಲಾಗಿದೆ.

ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಅಪರೂಪದ ಸಾಹಿತಿಯನ್ನು ಕಳೆದುಕೊಂಡಂತಾಗಿದೆ.

6. ಶ್ರೀ ನಾರಾಯಣರಾವ್ ಕೃಷ್ಣರಾವ್ ಕುಲಕರ್ಣಿ

ಕನ್ನಡದ ಹಿರಿಯ ಸಾಹಿತಿ, ನಗೆಗಾರ "ನಾನೀ ಕಾಕಾ" ಎಂದೇ ಖ್ಯಾತರಾಗಿದ್ದ ಶ್ರೀ ನಾರಾಯಣರಾವ್ ಕೃಷ್ಣರಾವ್ ಕುಲಕರ್ಣಿಯವರು ದಿನಾಂಕ 23–04–2005 ರಂದು ನಿಧನರಾದರು.

29 ನೇ ಆಗಸ್ಟ್, 1913 ರಲ್ಲಿ ಗದಗಿನಲ್ಲಿ ಜನಿಸಿದ ಶ್ರೀಯುತರು ಕನ್ನಡ ಸಾರಸ್ವತ ಲೋಕದಲ್ಲಿ ಎನ್ಕೆ ಎಂದೇ ಚಿರಪರಿಚಿತರಾಗಿದ್ದರು. ಶ್ರೀಯುತರು ಕನ್ನಡ ಮತ್ತು ಆಂಗ್ಲ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು. ಹಲವಾರು ಕಾದಂಬರಿ, ನಾಟಕಗಳು ಮತ್ತು ವಿಮರ್ಶಾಕೃತಿಗಳನ್ನು ರಚಿಸಿದ್ದ ಇವರಿಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಹಾಸ್ಯ ಸಾಹಿತಿ ಬಿರುದು, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಪ್ರಶಸ್ತಿ ಮುಂತಾದ

ಹಲವು ಬಿರುದು, ಸನ್ಮಾನಗಳಿಗೆ ಪಾತ್ರರಾಗಿದ್ದರು. ಶ್ರೀಯುತರ ನಿಧನದಿಂದ ಕನ್ನಡ ಸಾಹಿತ್ಯ ಲೋಕವು ಒಬ್ಬ ನಗೆಗಾರ ಹಾಗೂ ಸಾಹಿತಿಯನ್ನು ಕಳೆದುಕೊಂಡಂತಾಗಿದೆ.

7. ಶ್ರೀ ಹೆಚ್.ಡಿ. ಶೌರಿ

ಹಿರಿಯ ಹೋರಾಟಗಾರ ಹಾಗೂ ಗ್ರಾಹಕ ಚಳುವಳಿ ಹೋರಾಟಗಾರರಾದ ಶ್ರೀ ಹೆಚ್.ಡಿ. ಶೌರಿ ಅವರು ಗ್ರಾಹಕ ಚಳುವಳಿಯಲ್ಲಿ ತ್ಮಮದೇ ಆದ ಛಾಪನ್ನು ಮೂಡಿಸಿದ್ದವರು. ಕಾಮನ್ ಕಾಸ್ ವೇದಿಕೆಯ ಸ್ಥಾಪಕರಾಗಿ ಅಪಾರ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 28–06–2005 ರಂದು ನಿಧನ ಹೊಂದಿದರು.

ದಿವಂಗತರಾದ ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಡಾ॥ ದಾಮೋದರ್ ಮೂಲ್ಕಿ, ಲೋಕಸಭಾ ಸದಸ್ಯರು ಹಾಗೂ ಕೇಂದ್ರ ಸಚಿವರಾದ ಶ್ರೀ ಸುನೀಲ್‌ದತ್, ಪತ್ರಿಕೋದ್ಯಮಿ ಶ್ರೀ ಸಿ.ವಿ. ರಾಜ್‌ಗೋಪಾಲ್, ಹಿರಿಯ ವಿದ್ವಾಂಸ ಪ್ರೊ॥ ಸಿ.ಡಿ. ನರಸಿಂಹಯ್ಯ, ಆಧುನಿಕ ಕನ್ನಡ ಕಾವ್ಯ ಕ್ಷೇತ್ರದ ಅಗ್ರ ಪಂಕ್ತಿಯ ಕವಿ ಶ್ರೀ ಬಿ.ಸಿ. ರಾಮಚಂದ್ರ ಶರ್ಮ, ಖ್ಯಾತ ಸಾಹಿತಿ ಶ್ರೀ ನಾರಾಯಣ ಕೃಷ್ಣರಾವ್ ಕುಲಕರ್ಣಿ ಮತ್ತು ಗ್ರಾಹಕ ಚಳುವಳಿ ಹೋರಾಟಗಾರ ಶ್ರೀ ಹೆಚ್.ಡಿ. ಶೌರಿ ಇವರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು :– ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.